# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ
## ಹೂವಿನಹಡಗಲಿ
## ಅಸಲು ದಾವೆ ನಂ ಃ 163/2014

**ಪಿಡಬ್ಲೂ ಃ 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ ಃ 05-01-2018 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.

ಮುಂದುವರೆದಪಾಟಿ ಸವಾಲು ಃ ಪ್ರತಿವಾದಿಗಳ ಪರ ಶ್ರೀ.ಎಸ್.ಎಸ್.ಬಿ ವಕೀಲರಿಂದ ಃ

ಈ ದಾವಾ ಆಸ್ತಿಯಲ್ಲಿರುವ ಐಟಮ್ ನಂಬರ್ 08 ನೇ ಆಸ್ತಿಯನ್ನು ನನ್ನ ಸ್ವಂತ ಖರೀದಿ ಮಾಡಿರುವುದಿಲ್ಲ. ನನ್ನ ತಮ್ಮ ನಾಗಪ್ಪ ಖರೀದಿ ಮಾಡಿರುತ್ತಾನೆ. ಸದ್ರಿ ಟ್ರಾಕ್ಟರ್‌ನ್ನು ಖರೀದಿ ಮಾಡಲು ನಾನು ಹಣವನ್ನು ಕೊಟ್ಟಿರುತ್ತೇನೆ. ಟ್ರಾಕ್ಟರ್ ಖರೀದಿಸಲು ನಿಡಿದ ಹಣದ ಬಗ್ಗೆ ರಶೀದಿಯನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುತ್ತೇನೆ. ಹಣ ತುಂಬಿದ ಬಗ್ಗೆ ನಾನು ರಶೀದಿಯನ್ನು ನ್ಯಾಯಾಲಯಕ್ಕೆ ಯಾವುಕದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಮತ್ತು ಟ್ರಾಕ್ಟರ್ ಖರೀದಿಸಲು ಹಣವನ್ನು ಸಹ ನಾನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 5ನೇ ಪ್ರತಿವಾದಿಯು ಆ ಟ್ರಾಕ್ಟರನ್ನು ಸ್ವತಃ ತನ್ನ ಸ್ವಂತ ದುಡ್ಡಿನಿಂದ ಖರೀದಿ ಮೊತ್ತವನ್ನು ತುಂಬಿ ಅದಕ್ಕೆ ಆತನೇ ಮಾಲಿಕ ಮತ್ತು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ನನಗಾಗಲಿ 1 ರಿಂದ 4ನೇ ಪ್ರತಿವಾದಿಗಳಿಗಾಗಲಿ ದಾವ ನಂಬರ್ 08ನೇ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಐಟಮ್ ನಂಬರ್ 09 ನೇ ಆಸ್ತಿಯನ್ನು ನಾನು ಸ್ವಂತ ಖರೀದಿ ಮಾಡಿರುವುದಿಲ್ಲ. ಅದೇ ರೀತಿ 1 ರಿಂದ 04ನೇ ಪ್ರತಿವಾದಿಗಳು ಈ ಐಟಮ್ ನಂಬರ್ 09ನೇ ಆಸ್ತಿಯನ್ನು ಸ್ವಂತ ಖರೀದಿ ಮಾಡಿರುವುದಿಲ್ಲ. ಈ ಐಟಮ್ ನಂಬರ್ 09ನೇ ಆಸ್ತಿಯನ್ನು ನನ್ನ ತಮ್ಮ 5ನೇ ಪ್ರತಿವಾದಿ ಸ್ವಂತ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಐಟಮ್ ನಂಬರ್ 09ನೇ ಆಸ್ತಿಯಲ್ಲಿ ನನಗಾಗಲಿ 1 ರಿಂದ 04ನೇ ಪ್ರತಿಗಳಿಗಾಗಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಈಗ ನಮ್ಮ ಮನೆತನದಲ್ಲಿ ಎತ್ತುಗಳು ಇರುತ್ತವೆ. ಅವುಗಳು 05 ನೇ ಪ್ರತಿವಾದಿಯ ಬಳಿಯಲ್ಲಿ ಇರುತ್ತವೆ. ಆ ಎತ್ತುಗಳು ಈಗ ಇರುವುದಿಲ್ಲ ಅವುಗಳು ಮೊದಲು ಇದ್ದವು ಎಂದರೆ ಸರಿಯಲ್ಲ. ದಾವಾ

ಆಸ್ತಿಯ ಐಟಮ್ ನಂಬರ್ 01 ರಿಂದ 03 ಇಪ್ಪತ್ತು ವರ್ಷಗಳ ಹಿಂದೆಯೇ ಪಾಲು ವಿಭಾಗದ ಪ್ರಕಾರ ಪಾಲು ಆಗಿರುತ್ತದೆ ಎಂದರೆ ಸರಿಯಲ್ಲ. ಆ ಪ್ರಕಾರವಾಗಿ ಅವರವರಿಗೆ ಈಸೆಗೆ ಬಂದಿದ್ದು ಅವರವರ ಪಹಣಿ ಪತ್ರಗಳು ಸಹ ಬೇರೆ ಬೇರೆಯಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ಪ್ರಕಾರವಾಗಿ 20 ವರ್ಷದಿಂದ ಅವರವರಿಗೆ ಬಂದ ಈಸೆಯಲ್ಲಿ ಅವರವರೆ ಸ್ವಾಧಿನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದು ಸಹ ಮತ್ತೊಂದು ಸಾರಿ ಪಾಲು ಆಗಬೇಕೆಂದು ಈ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.